ಶ್ರೀ ಎಸ್. ಆರ್. ಬೊಮ್ಮಾಯಿ,—ಆದಷ್ಟು ಜಾಗ್ರತೆ ಮಾಡುತ್ತೇವೆ. ಇಷ್ಟು ದಿವಸದಲ್ಲೇ ಮಾಡುತ್ತೇವೆ ಎಂದು ಹೇಳುವುದಿಲ್ಲ,

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಆರ್. ಬೊಮ್ಮಾಯಿ.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದಾವಣಗೆರೆ ಕ್ಷೇತ್ರದಿಂದ ಸರಕಾರಕ್ಕೆ ಬರುತ್ತಿರುವ ವರಮಾನ

೨೩೫೫ ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಕ್ಕೆ ದಾವಣಗೆರೆ ಕ್ಷೇತ್ರದಿಂದ ತೆರಿಗೆ ಇತ್ಯಾದಿಗಳಿಂದ ಬರುವ ಒಟ್ಟು ಆದಾಯದ ಮೊತ್ತವೆಷ್ಟು ?

ಆ) ಸರ್ಕಾರದವರು ಈ ಕ್ಷೇತ್ರಕ್ಕೆ ಖರ್ಚು ಮಾಡುತ್ತಿರುವ ಹಣದ ಮೊತ್ತವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಯಾವುದೇ ನಿರ್ದಿಷ್ಟ ಪ್ರದೇಶದಿಂದ ಸರ್ಕಾರಕ್ಕೆ ಬರುವ ಆದಾಯಗಳು ಮತ್ತು ಯಾವುದೇ ಪ್ರದೇಶದ ಮೇಲೆ ಸರ್ಕಾರವು ಮಾಡುವ ವೆಚ್ಚವು, ಒಂದು ಚುನಾವಣ ಕ್ಷೇತ್ರಕ್ಕೆ ಸರಿಸವಾನವಾಗಿರುವುದಿಲ್ಲ. ಆದಾಗ್ಯೂ ಕೆಲವು ಮುಖ್ಯ ಇಲಾಖೆಗಳಿಗೆ ಸಂಬಂಧಿಸಿದ ಅಂದಾಜು ಮೊತ್ತಗಳು,

ಅ) ೯೫೫.೬೫ ಲಕ್ಷ ರೂ.ಗಳು.

ಆ) ೪೯೬.೮೨ ಲಕ್ಷ ರೂ.ಗಳು.

ಬರಗೂರಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸೌಲಭ್ಯಗಳನ್ನು ಒದಗಿಸುವುದು

೧೦೧೩ ಶ್ರೀ ಸಿ.ಪಿ. ಮೂಡಲಗಿರಿಯಪ್ಪ (ಶಿರಾ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ಕ್ಷೇತ್ರಕ್ಕೆ ಸೇರಿದ ಹುಲಿಕುಂಟೆ ಹೋಬಳಿ ಬರಗೂರಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬಹಳ ವರ್ಷಗಳಿಂದ ಮಹಿಳಾ ವೈದ್ಯಾಧಿಕಾರಿ ಇಲ್ಲದೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ಸ್ಥಳಕ್ಕೆ ಮಹಿಳಾ ವೈದ್ಯಾಧಿಕಾರಿಯನ್ನು ನೇಮಿಸಲು ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆಯೆ?

ಇ) ಈ ಆಸ್ಪತ್ರೆಯಲ್ಲಿ ಸ್ಥಳಾವಕಾಶ ಮತ್ತು ಸಲಕರಣೆಗಳು ಇಲ್ಲದೆ ರೋಗಿಗಳು ಶಿರಾ ಅಥವಾ ತುಮಕೂರಿಗೆ ಹೋಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ. ?

ಈ) ಹಾಗಿದ್ದಲ್ಲಿ ಇದರ ಪರಿಹಾರಕ್ಕಾಗಿ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ?

ಶ್ರೀ ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು).—

(ಅ) ಬಂದಿದೆ,

(ಆ) ಲೋಕಸೇವಾ ಆಯೋಗವನ್ನು ೫೦೦ ಮಹಿಳಾ ವೈದ್ಯರನ್ನು ನೇಮಕಾತಿ ಮಾಡಲು ಕೇಳಿಕೊಳ್ಳಲಾಗಿದೆ. ನೇಮಕಾತಿ ಆದ ಮೇಲೆ ಅಥವಾ ಸ್ನಾತಕೋತ್ತರ ಶಿಕ್ಷಣ ಮುಗಿಸಿ ಬರುವ ವೈದ್ಯಾಧಿಕಾರಿಗಳಿಂದ ಈ ಹುದ್ದೆಯನ್ನು ತುಂಬಲಾಗುತ್ತದೆ.

(ಇ)ಬಂದಿದೆ. ಆಸ್ಪತ್ರೆಯ ಕಟ್ಟಡದ ಛಾವಣಿ ಸೋರುತ್ತಿರುವುದರಿಂದ,ಒಳರೋಗಿಗಳನ್ನು ದಾಖಲು ಮಾಡಿಕೊಳ್ಳುತ್ತಿಲ್ಲ. ರಿಪೇರಿಗಾಗಿ ೨೫,೦೦೦ ರೂ.ಗಳ ಅಂದಾಜು ಪಟ್ಟಿಯನ್ನು ಮರು ಸಹಿ ಹಾಕಿ,

ವಂಧ್ಯಗಿರಿ ಉಪವಿಭಾಗದ ಕಾರ್ಯನಿರ್ವಾಹಕ ಅಭಿಯಂತರಿಗೆ ಕಳುಹಿಸಲಾಗಿದೆ. ಕಾರ್ಯ ಇನ್ನೂ ಪ್ರಾರಂಭವಾಗಬೇಕಾಗಿದೆ. ಕಾರ್ಯವನ್ನು ತ್ವರಿತಗೊಳಿಸಲಾಗುವುದು. ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕ್ಷ-ಕಿರಣಯಂತ್ರ ಘಟಕ ಮತ್ತು ದಂತ ಘಟಕಗಳ ಸೌಲಭ್ಯಗಳು ಮಂಜೂರಾಗಿಲ್ಲ. ಕ್ಷ-ಕಿರಣ ಪರೀಕ್ಷೆ ಮತ್ತು ದಂತ ಚಿಕಿತ್ಸೆಯ ಸೌಲಭ್ಯದ ಅವಶ್ಯಕತೆ ಇರುವ ರೋಗಿಗಳು ಶಿರಾ ಅಥವಾ ತುಮಕೂರಿಗೆ ಹೋಗುತ್ತಿದ್ದಾರೆ.

(ಈ) ತಕ್ಷಣ ರಿಪೇರಿ ಕೆಲಸವನ್ನು ಪ್ರಾರಂಭಿಸುವಂತೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಕೋರಲಾಗಿದೆ.

ಈ ಪ್ರಾಥಮಿಕ ಆರೋಗ್ಯ ಕೇಂದ್ರವು ತಾಲ್ಲೂಕು ಮಟ್ಟಕ್ಕಿಂತ ಕೆಳಗಿನ ಸ್ಥಳದಲ್ಲಿರುವುದರಿಂದ ಸದ್ಯಕ್ಕೆ ಕ್ಷ-ಕಿರಣ ಯಂತ್ರ ಘಟಕ ಮತ್ತು ದಂತ ಚಿಕಿತ್ಸಾ ಸೌಲಭ್ಯವನ್ನು ಒದಗಿಸಿಲ್ಲ.

ಮಂಗಳಬಾಗಿಲು ಟೂರಿಸ್ಟ್ ಸೆಂಟರ್ ಮಾಡುವುದು

೧೨೧೫. ಶ್ರೀ ಆರ್. ವೆಂಕಟರಾಮಯ್ಯ (ಮಂಗಳಬಾಗಿಲು) — ಮಾನ್ಯ ವಾರ್ತೆ, ಯುವಜನ ಸೇವೆ, ಕ್ರೀಡೆ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳಬಾಗಿಲು ನಗರ ಕರ್ನಾಟಕದ ಗಡಿಯಲ್ಲಿದ್ದು ತಿರುಪತಿ ತಿರುತ್ತಣಿ ಮದ್ರಾಸಿಗೆ ಹೋಗುವ ದಾರಿಯಲ್ಲಿದ್ದು ಪ್ರವಾಸೋದ್ಯಮದ ಕೇಂದ್ರವಾಗಿಲ್ಲವೇ ?

ಆ) ಈ ನಗರವನ್ನು ಪ್ರವಾಸೋದ್ಯಮದ ಕೇಂದ್ರವೆಂದು (ಟೂರಿಸ್ಟ್ ಸೆಂಟರ್) ಮಾಡಬೇಕೆಂದು ಕೋರಿಕೆ ಇದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಜೀವರಾಜ ಆಳ್ವ (ವಾರ್ತೆ, ಪ್ರವಾಸೋದ್ಯಮ ಮತ್ತು ಯುವಜನ ಸೇವೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಕ್ರೀಡಾ ರಾಜ್ಯ ಸಚಿವರು).—

ಅ) ಹೌದು.

ಆ) ಇಲ್ಲ.

ಇ) ಇಲ್ಲಿ ಹೆದ್ದಾರಿ ತಂಗುದಾಣವನ್ನು ನಿರ್ಮಿಸಲು ಸುಮಾರು ೧ ಎಕರೆ ಜಮೀನನ್ನು ವಶ ಪಡಿಸಿಕೊಳ್ಳುವ ಕ್ರಮ ಕೈಗೊಳ್ಳಲಾಗಿದೆ.

ಗೊಬ್ಬರ ಮತ್ತು ದನಗಳ ಮೇವು ರಾಜ್ಯದಿಂದ ಹೊರ ಹೋಗುತ್ತಿರುವುದು

೧೨೧೮. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನಕೋಟೆ).— ಮಾನ್ಯ ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೊಬ್ಬರ ಮತ್ತು ದನಗಳ ಮೇವಿನ ಹುಲ್ಲು ರಾಜ್ಯದಿಂದ ಹೊರ ಹೋಗಲು ಅವಕಾಶ ವಿದೆಯೆ ?

ಆ) ಇಲ್ಲದಿದ್ದಲ್ಲಿ ರಾಜ್ಯಗಳ ಪಡಿಯಲ್ಲಿ ತಡೆ ಹಿಡಿಯಲು ಸರ್ಕಾರವು ಯಾವ ರೀತಿ ಕ್ರಮ ಕೈಗೊಂಡಿದೆ ?

ಇ) ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆಯ ಮೂಲಕ ಕೇರಳಕ್ಕೆ ಹೋಗುವ ಮಾರ್ಗದಲ್ಲಿ ಇದುವರೆಗೆ ತಡೆಹಿಡಿದಿರುವ ಪ್ರಕರಣಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ ಹಾಗೂ ಅವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ?